# ಶ್ರೀಚೈತನ್ಯ ಮಹಾಪ್ರಭು – ೫

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

**ಅದ್ವೈತ ಆಚಾರ್ಯನ ಪರಿವರ್ತನೆ**

ತಮ್ಮ ಭಕ್ತಿಪಂಥಕ್ಕೆ ಎದುರಾಳಿಯಾಗಿದ್ದ ಇನ್ನೊಬ್ಬನ್ನೂ ಶ್ರೀಚೈತನ್ಯ ಮಹಾಪ್ರಭು ಪರಿವರ್ತಿಸಿದರು. ಅವನೆಂದರೆ ಅದ್ವೈತ ಆಚಾರ್ಯ. ನಿಮಾಯಿಯಲ್ಲಿ ಕಂಡುಬರುತ್ತಿದ್ದ ದಿವ್ಯ ಭಾವಗಳನ್ನು ಅನೇಕ ಬಾರಿ ಈತ ಕಂಡಿದ್ದನಾದರೂ, ಅವುಗಳಲ್ಲಿ ದೃಢವಿಶ್ವಾಸ ಇನ್ನೂ ಮೂಡಿರಲಿಲ್ಲ. ಅವೆಲ್ಲವೂ ನಿಮಾಯಿಯ ಮನಸ್ಸಿನ ಭ್ರಮೆಗಳು ಎಂದು ಅವನು ತಿಳಿದಿದ್ದ. ವೈಷ್ಣವರು ತಮ್ಮ ಕುಲದ ನೇತಾರನೆಂದು ಅದ್ವೈತನನ್ನು ಪರಿಗಣಿಸಿದ್ದರಾದರೂ, ಜ್ಞಾನವೇ ಪರಮ ಸಾಧನವೆಂದೂ, ಭಕ್ತಿಯು ಸಾಮಾನ್ಯಜನರ ಜೀವನಮಾರ್ಗವೆಂದೂ ಅವನು ಪ್ರತಿಪಾದಿಸುತ್ತಿದ್ದ. ನಿಮಾಯಿ ಅವನ ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಬದಲಿಸಲು ನಿಶ್ಚಯಿಸಿ, ಇದಕ್ಕಾಗಿ ನವದ್ವೀಪಕ್ಕೆ ೧೨ ಮೈಲಿ ದೂರದಲ್ಲಿನ ಶಾಂತಿಪುರದಲ್ಲಿರುವ ಅದ್ವೈತನ ಮನೆಗೆ ಹೋದ. ದಿವ್ಯಭಾವದಲ್ಲಿದ್ದ ನಿಮಾಯಿ "ನೀನೇಕೆ ಅಸತ್ಯವಾದ ತತ್ತ್ವವನ್ನು ಉಪದೇಶಿಸುವೆ?" ಎಂದು ಅದ್ವೈತ ಆಚಾರ್ಯನನ್ನು ಪ್ರಶ್ನಿಸಿದ. ಅದ್ವೈತ ಉತ್ತರಿಸಲು ನಿರಾಕರಿಸಿದ. ಆಗ ನಿಮಾಯಿ ಒಂದು ಕೋಲಿನಿಂದ ಅದ್ವೈತನನ್ನು ಹೊಡೆಯಲು ಆರಂಭಿಸಿದ. ಅವನ ಈ ವರ್ತನೆಯನ್ನು ಇತರರು ಖಂಡಿಸಿದರಾದರೂ ಅದ್ವೈತ ಆ ಹೊಡೆತಗಳಿಂದ ಆನಂದವನ್ನೇ ಅನುಭವಿಸುತ್ತಿದ್ದ. ಹರ್ಷದಿಂದ ಬೀಗುತ್ತ ಉದ್ಗರಿಸಿದ: "ಆಹಾ! ನನ್ನ ಈ ದಯಾಳು ಸ್ವಾಮಿಗಿಂತ ಕರುಣಾಳು ಬೇರೆ ಯಾರು ತಾನೆ ಇದ್ದಾರೆ? ನಾನು ಅವನನ್ನು ತ್ಯಜಿಸಿ ಬಿಟ್ಟಿದ್ದೆ, ಆದರೆ ಅವನೇ ನನ್ನನ್ನು ಮತ್ತೆ ವಶಪಡಿಸಿಕೊಳ್ಳಲು ಇಲ್ಲಿಯವರೆಗೂ ಬಂದಿರುವನಲ್ಲಾ!" ಸ್ವಲ್ಪ ಸಮಯದ ನಂತರ ನಿಮಾಯಿ ಪ್ರಭುವು ಮತ್ತೆ ಗಟ್ಟಿಯಾಗಿ ಹೇಳಿದ: "ನಿನಗೆ ಜ್ಞಾನವೇ ಬೇಕೆಂದಾದರೆ, ಭಗವಂತನನ್ನು ಅವತಾರ ತಾಳು ಎಂದು ಪ್ರಾರ್ಥಿಸುವೆಯೇಕೆ?" ಈ ಮಾತಿನ ಹಿಂದಿನ ಅರ್ಥ ಇದು. ನಾವೀಗಾಗಲೇ ನೋಡಿರುವಂತೆ, "ಜನರ ಮನಸ್ಸನ್ನು ಸರಿಯಾದ ದಾರಿಗೆ ತಿರುಗಿಸು" ಎಂದು ಅದ್ವೈತ ಆಚಾರ್ಯನು ಮಾಡಿದ್ದ ಪ್ರಾರ್ಥನೆಯ ಫಲವಾಗಿಯೆ ಭಗವಂತನು ನಿಮಾಯಿಯಾಗಿ ಅವತಾರವೆತ್ತಿದ್ದಾನೆ. ಮೇಲಿನ ಮಾತಿನ ಮೂಲಕ ನಿಮಾಯಿಯು ಅದ್ವೈತ ಆಚಾರ್ಯನಿಗೆ ಇದನ್ನು ನೆನಪಿಸಿಕೊಟ್ಟನು. ಈ ಘೋಷಣೆಯಿಂದ ಆಚಾರ್ಯನಿಗೆ ಆಶ್ಚರ್ಯವಾಯಿತು. ಪ್ರಭು ಜನಗಳಲ್ಲಿ ಭಕ್ತಿಯನ್ನು ಉದ್ದೀಪನಗೊಳಿಸಲು ಹಲವು ಮಾರ್ಗಗಳನ್ನು ಅನುಸರಿಸುತ್ತಾನೆ; ಕೆಲವರಿಗೆ ಬರಿಯ ಕಣ್ಣ ನೋಟದಿಂದ, ಮತ್ತೆ ಕೆಲವರಿಗೆ ಸ್ಪರ್ಶದಿಂದ, ಇನ್ನೂ ಕೆಲವರಿಗೆ ಆಶೀರ್ವಾದದಿಂದ. ಆದರೆ ಅದ್ವೈತ ಆಚಾರ್ಯನ ವಿಷಯದಲ್ಲಿ, ಕಡೆಯದಾದ ದಂಡನೆಯ ಮಾರ್ಗವನ್ನು ಪ್ರಭುವು ಅನುಸರಿಸಿದ್ದನ್ನು ನಾವು ಕಾಣುತ್ತೇವೆ.

**ಶ್ರೀಚೈತನ್ಯರಲ್ಲಿ ರಾಧಾಭಾವದ ಉದ್ದೀಪನ**

ವೈಷ್ಣವ ಸಂಪ್ರದಾಯದ ಸಂತರು ಚೈತನ್ಯನ ಶರೀರದಲ್ಲಿ ರಾಧಾ ಮತ್ತು ಕೃಷ್ಣ – ಇವರಿಬ್ಬರೂ ನೆಲೆಸಿದ್ದಾರೆ ಎಂದು ಪ್ರತಿಪಾದಿಸುತ್ತಾರೆ. ಅದಕ್ಕೆ ಆಧಾರವಾಗಿ ಅವರು ಹೇಳುವ ಕತೆ ಇದು. ವೃಂದಾವನದ ಲೀಲಾಪ್ರಸಂಗದ ಸಮಯದಲ್ಲಿ ರಾಧೆಯು ಕೃಷ್ಣಪ್ರೇಮದ ಮಧುರಾನಂದವನ್ನು ಅನೇಕ ವಿಧಗಳಲ್ಲಿ ಸವಿದಳು. ಆಗ ಶ್ರೀಕೃಷ್ಣ ಭಾವಿಸಿದನಂತೆ, ತಾನೂ ಕೂಡ ಒಂದೇ ದೇಹದಲ್ಲಿ ರಾಧೆಯ ಭಾವ ಮತ್ತು ತನ್ನ ಸ್ವಂತ ಭಾವ – ಇವೆರಡನ್ನೂ ಸವಿಯಬೇಕು ಎಂದು. ಆ ಬಯಕೆಯನ್ನು ಪೂರೈಸುವ ಸಲುವಾಗಿ ಚೈತನ್ಯನ ಅವತಾರವಾಯಿತು. ಆದ್ದರಿಂದಲೆ ಚೈತನ್ಯನ ವ್ಯಕ್ತಿತ್ವದಲ್ಲಿ ಶ್ರೀಕೃಷ್ಣ ಮತ್ತು ರಾಧೆಯರ ವ್ಯಕ್ತಿತ್ವಗಳೆರಡೂ ಒಡಮೂಡಿರುವುದನ್ನು ನಾವು ಕಾಣಬಹುದು. ಹೀಗಾಗಿ, ಒಮ್ಮೆ ಅವನಲ್ಲಿ ಶ್ರೀಕೃಷ್ಣಭಾವ ಸ್ಫುರಣಗೊಂಡರೆ, ಮತ್ತೊಮ್ಮೆ ರಾಧೆಯ ಭಾವ ಉದ್ದೀಪನಗೊಳ್ಳುತ್ತಿತ್ತು. ಇಲ್ಲಿಯವರೆಗೆ, ಭಕ್ತಿದಾತನೂ, ಸರ್ವರ ಪಾಲಕನೂ ಆದ ಭಗವಾನ್ ಶ್ರೀಕೃಷ್ಣನ ಭಾವವು ನಿಮಾಯಿಯಲ್ಲಿ ವ್ಯಕ್ತವಾಗಿತ್ತು. ನಿಮಾಯಿ ಇಪ್ಪತ್ತನಾಲ್ಕು ವರ್ಷ ವಯಸ್ಸಾದಾಗ ರಾಧಾಭಾವ ಹೆಚ್ಚು ಹೆಚ್ಚು ಪ್ರಕಾಶವಾಗತೊಡಗಿತು. ಇದುವರೆಗೆ ಭಕ್ತಿಯನ್ನು ಬೋಧಿಸುತ್ತಿದ್ದ ಅವನು, ಇನ್ನು ಮುಂದೆ, ರಾಧಾಭಾವದ ಮೂಲಕ, ಭಗವತ್ ಪ್ರೀತಿಯ ಉತ್ಕಟ ಸ್ಥಿತಿಯಾದ ಪ್ರೇಮವನ್ನು ಬೋಧಿಸಲು ಇಚ್ಛಿಸಿದನು. ವಿರಹ ಮತ್ತು ಮಿಲನ–ಈ ಎರಡೂ ಸಂದರ್ಭಗಳಲ್ಲಿ ಅತ್ಯಂತ ಉತ್ಕಟವೂ ಆಪ್ಯಾಯಮಾನವೂ ಆದ ಕೃಷ್ಣಪ್ರೇಮವನ್ನು ರಾಧೆ ಅನುಭವಿಸಿದ್ದಳು. ಆ ದಿವ್ಯಪ್ರೇಮಭಾವವನ್ನು ತನ್ನ ಉದಾಹರಣೆಯ ಮೂಲಕ ಆಧುನಿಕ ಕಾಲದಲ್ಲಿ ಚೈತನ್ಯದೇವನು ಪ್ರದರ್ಶಿಸಬೇಕಾಗಿತ್ತು. ರಾಧಾಭಾವವು ಚೈತನ್ಯನಲ್ಲಿ ಅಭಿವ್ಯಕ್ತವಾದುದರ ಮಹತ್ವ ಇದೇ ಎಂದು ಹೇಳಲಾಗುತ್ತದೆ. ಚೈತನ್ಯನ ಆವಿರ್ಭಾವಕ್ಕೆ ಮೊದಲು, ಮಹಾನ್ ಕೀರ್ತನಕಾರ ಮತ್ತು ಕವಿಯಾದ ಜಯದೇವನು ತನ್ನ ಕೃತಿಯಾದ 'ಗೀತ–ಗೋವಿಂದ' ಕಾವ್ಯದಲ್ಲಿ ಇದನ್ನು ವಿವರವಾಗಿ ವರ್ಣಿಸಿದ್ದ. ಆದರೆ, ಭಕ್ತಿಗಿಂತಲೂ ಉತ್ಕಟವಾಗಿದ್ದು, ಪ್ರೇಮ ಎಂದು ಕರೆಯಲಾಗುವ ಈ ಭಾವದ ಸಾಕ್ಷಾತ್ ಪ್ರದರ್ಶನವು ಚೈತನ್ಯನ ಅವತಾರ ಕಾಲದಲ್ಲಿ ನಡೆಯಿತು.

ಗಯಾ ಕ್ಷೇತ್ರದಲ್ಲಿ ಈಶ್ವರಪುರಿಯ ಬಳಿ ದೀಕ್ಷೆ ಪಡೆದು ಹಿಂತಿರುಗಿದ ನಂತರ ನಿಮಾಯಿಯಲ್ಲಿ ಕಂಡುಬಂದ ಭಾವ

ಪರಿವರ್ತನೆಯ ಬಗ್ಗೆ ನಾವೀಗಾಗಲೆ ತಿಳಿದಿದ್ದೇವೆ. ಅವು ಕಾಲ ಕ್ರಮೇಣ ಶಮನಗೊಂಡಿದ್ದರಿಂದ, ನಿಮಾಯಿಗೆ ತನ್ನ ಮನಃಸ್ಥಿತಿಗಳ ಮೇಲೆ ನಿಯಂತ್ರಣ ಸಿಕ್ಕಿತ್ತು. ಆದರೆ ಈಗ, ರಾಧಾ ಭಾವವು ಹೆಚ್ಚು ಹೆಚ್ಚು ಉದ್ದೀಪನಗೊಂಡ ಹಾಗೆಲ್ಲ, ಅದೇ ರೀತಿಯ ಅವಸ್ಥೆ ಮರುಕಳಿಸಿತು. ಮನಸ್ಸಿನ ಹಲವು ಬಗೆಯ ಹೊಯ್ದಾಟಗಳು ಮತ್ತು ಅಸಮತೋಲನಗಳು ಮತ್ತೆ ಮತ್ತೆ ಕಾಣಿಸಿಕೊಂಡವು. ಆ ಭಾವದಲ್ಲಿ ಕಂಡುಬಂದ ಉತ್ಕಟ ವ್ಯಾಕುಲತೆಯಿಂದ ಆಗಾಗ ನಿಟ್ಟುಸಿರು ಬಿಡಲಾರಂಭಿಸಿದನು, ವಿರಹವೇದನೆಯಿಂದ ನರಳುತ್ತಿದ್ದನು ಮತ್ತು ಮೂರ್ಛೆ ಹೋಗುತ್ತಿದ್ದನು.

ಅದಲ್ಲದೆ ನಿಮಾಯಿ, ತನ್ನ ಸನಿಹದವರಲ್ಲಿ, ವೃಂದಾವನ ಧಾಮಕ್ಕೆ ಹೋಗಬೇಕೆಂಬ ತನ್ನ ಬಯಕೆಯನ್ನು ತೋಡಿಕೊಳ್ಳಲಾರಂಭಿಸಿದನು. ಶ್ರೀಕೃಷ್ಣನೊಡನೆ ಮಿಲನವಾಗುವುದು ಅಲ್ಲಿ ಮಾತ್ರ ಎಂದು ಅವನಿಗೀಗ ಖಚಿತವಾಗಿತ್ತು. ಇದಕ್ಕಾಗಿ ತನ್ನ ತಾಯಿ, ಪತ್ನಿ, ಸ್ನೇಹಿತರು, ಭಕ್ತರು, ಮನೆ – ಇವೆಲ್ಲವನ್ನೂ ತ್ಯಾಗಮಾಡಿ, ತನ್ನ ಅಣ್ಣ ವಿಶ್ವರೂಪನಂತೆ ಸಂನ್ಯಾಸಿಯಾಗಲು ಸಿದ್ಧನಾಗಿದ್ದನು. ಇನ್ನೊಂದು ವಿಚಾರವೂ ಅವನ ಮನಸ್ಸಿಗೆ ಬಂದಿತ್ತು: "ನಾನು ನಿಮಾಯಿ ಪಂಡಿತ ಎಂದು ಕರೆಸಿಕೊಂಡು, ನನ್ನ ಬಂಧು ಬಾಂಧವರು ಮತ್ತು ಆಸ್ತಿಪಾಸ್ತಿಯೊಂದಿಗೆ ಬಾಳುತ್ತಿದ್ದೇನೆ. ಹೀಗೇ ಇದ್ದರೆ, ನನ್ನನ್ನು ಟೀಕಿಸುತ್ತಿರುವ ನದಿಯಾದಲ್ಲಿರುವ ಪ್ರತಿಷ್ಠಿತ ಬ್ರಾಹ್ಮಣ ಪಂಡಿತರು, ನಾನು ಉಪದೇಶಿಸುತ್ತಿರುವ ನೂತನ ಸಿದ್ಧಾಂತಕ್ಕೆ ಬೆಲೆಕೊಡಲಾರರು. ಆದ್ದರಿಂದ ಸಂನ್ಯಾಸ ಧರ್ಮವನ್ನಪ್ಪುವ ತನಕ ನನ್ನ ಜೀವನದ ಲಕ್ಷ್ಯವು ಪರಿಪೂರ್ಣವಾಗದು."

ಭಕ್ತರಿಗೆ ಇದರ ಸುಳಿವು ಸಿಕ್ಕಿತು. ಈ ನಿಶ್ಚಯವನ್ನು ಕೈಬಿಡಲು ನಿಮಾಯಿಯನ್ನು ಅವರೆಲ್ಲ ಸೇರಿ ಬಹಳ ಒತ್ತಾಯಿಸಿದರು ಕೂಡ. ಆದರೆ ಎಲ್ಲಕ್ಕೂ ದೊಡ್ಡ ಅಡ್ಡಿಯಾಗಿದ್ದವರೆಂದರೆ, ಅವನ ತಾಯಿ ಶಚೀದೇವಿ ಮತ್ತು ಹೆಂಡತಿ ವಿಷ್ಣುಪ್ರಿಯಾ. ಅವರನ್ನು ಒಪ್ಪಿಸಲು ನಿಮಾಯಿ ತುಂಬ ಪ್ರಯಾಸ ಪಡಬೇಕಾಯಿತು. ಬಹಳಷ್ಟು ವಿನಂತಿಸಿಕೊಂಡ ಮೇಲೆ, ಒಲ್ಲದ ಮನಸ್ಸಿನಿಂದ ಅವರಿಬ್ಬರೂ ಒಪ್ಪಿದರು. ಕ್ರಿ.ಶ. ೧೫೧೦, ಜನವರಿ ತಿಂಗಳ ಒಂದು ರಾತ್ರಿ, ಇಡೀ ನವದ್ವೀಪ ಮಲಗಿದ್ದಾಗ, ನಿಮಾಯಿ ಎದ್ದು, ಮನೆಯಿಂದ ಗುಟ್ಟಾಗಿ ಹೊರಬಂದ. ನದಿ ಯನ್ನು ಈಜಿ ದಾಟಿದ. ತನ್ನನ್ನು ಯಾರಾದರೂ ಹಿಂಬಾಲಿಸಿ, ಹಿಂತಿರುಗಿ ಕರೆದುಕೊಂಡುಹೋದಾರೆಂದು, ಹದಿನಾರು ಮೈಲು ಗಳ ದೂರದಲ್ಲಿರುವ ಕಾಟ್ವಾ ಎಂಬ ಸ್ಥಳಕ್ಕೆ, ಓಡಿಕೊಂಡೇ ಹೋದ.

### ಸಂನ್ಯಾಸ ಸ್ವೀಕಾರ

ಕಾಟ್ವಾದಲ್ಲಿ ಕೇಶವ ಭಾರತಿ ಎನ್ನುವ ಸಂನ್ಯಾಸಿಗಳಿದ್ದರು. ಅವರ ಸಂಗಡ ನಿಮಾಯಿಯು ಪ್ರಾರಂಭದಿಂದಲೇ ಸಂಪರ್ಕ ಹೊಂದಿದ್ದನು. ಈಗ ನಿಮಾಯಿಯು ಸಂನ್ಯಾಸಾಶ್ರಮಕ್ಕೆ ಸೇರಿಸಿಕೊಳ್ಳಬೇಕೆಂದು ಅವರಲ್ಲಿ ಬೇಡಿಕೊಂಡನು. ಆದರೆ ತನ್ನ ಈ ಗುರಿಯನ್ನು ಸಾಧಿಸಲು ಅವನು ಹಲವು ಕಷ್ಟಗಳನ್ನು ಅನುಭವಿಸಬೇಕಾಯಿತು. ನಿಮಾಯಿ ಯಾರೋ ಒಬ್ಬ ಸಂನ್ಯಾಸಿಯನ್ನು ಭೇಟಿಮಾಡಲು ಕಾಟ್ವಾಕ್ಕೆ ಹೋಗಿರಬಹುದೆಂಬ ಗುಮಾನಿಯಿಂದ ನಿತ್ಯಾನಂದನ ನೇತೃತ್ವದಲ್ಲಿ ಒಂದು ಗುಂಪು ಅಲ್ಲಿಗೆ ಬಂದಿತು. ಅದರ ಜೊತೆಗೆ ಕೇಶವ ಭಾರತಿಯೆ ತಾವೇನು ಮಾಡಬೇಕು ಎಂಬ ವಿಷಯದಲ್ಲಿ ಗೊಂದಲಕ್ಕೀಡಾಗಿದ್ದರು. ಇಲ್ಲೊಬ್ಬ ಸ್ಫುರದ್ರೂಪಿ ನವಯುವಕ, ಅವನ ಆಶ್ರಿತರಾಗಿ ಮನೆಯಲ್ಲಿ ವಯಸ್ಸಾದ ತಾಯಿ ಮತ್ತು ಯುವ ಪತ್ನಿ ಬೇರೆ ಇದ್ದಾರೆ– ಅಂತಹವನು ಸಂನ್ಯಾಸವನ್ನಪ್ಪುವುದೆಂದರೇನು?! ಸಂನ್ಯಾಸ ಜೀವನವಾದರೋ, ಅಲೆಮಾರಿಯ ಹಾಗೂ ಅದೃಷ್ಟ ಏನನ್ನು ನೀಡುತ್ತದೆಯೋ ಅದರಿಂದ ಮಾತ್ರವೇ ಹೊಟ್ಟೆ ತುಂಬಿಸಿಕೊಳ್ಳಬೇಕಾದಂತಹ ಜೀವನ! ಈ ಬಗೆಯ ಜೀವನ ನಿಮಾಯಿಗೆ ಸಾಧ್ಯವೆ? – ಇದು ಕೇಶವ ಭಾರತಿಗಿದ್ದ ಸಂದೇಹ.

ಆ ಸಮಯದಲ್ಲಿ ನಿಮಾಯಿಯ ಶರೀರ ಬಂಗಾರದಂತೆ ಹೊಳೆಯುತ್ತಿತ್ತು. ಅವನ ಅನುಪಮ ವ್ಯಕ್ತಿತ್ವವನ್ನು ಕಂಡ ಜನ ಅವನ ಸುತ್ತ ಗುಂಪುಗೂಡಿದರು. ಆದರೆ ನಿಮಾಯಿಗೆ ಮಾತ್ರ ಸುತ್ತಲಿನ ಜಗತ್ತಿನ ಪರಿವೆಯೆ ಇರಲಿಲ್ಲ. ಶ್ರೀಕೃಷ್ಣನ ಅಗಲಿಕೆಯಿಂದ ರಾಧೆಗೆ ಉಂಟಾದ ವಿರಹವೇದನೆ ಮತ್ತು ಶ್ರೀಕೃಷ್ಣನನ್ನು ಕಾಣಲೇಬೇಕೆಂಬ ಅತೀವ ಕಾತರ – ಇವುಗಳಲ್ಲಿಯೆ ಅವನ ಮನಸ್ಸು ಲೀನವಾಗಿ ಹೋಗಿತ್ತು. ಎಲ್ಲ ಪ್ರಾಪಂಚಿಕ ಬಂಧನಗಳನ್ನೂ ತೊರೆದು ವೃಂದಾವನಕ್ಕೆ ಹೋಗಲೇಬೇಕಾದ ಸಮಯ ಒದಗಿ ಬಂದಿತ್ತು. ಸಂಸಾರದಲ್ಲಿ ಮುಳುಗಿರುವ ಜೀವಿಯು ತನ್ನ ದೇಹಕ್ಕೆ ಅಂಟಿಕೊಂಡಿರುತ್ತಾನೆ. ಇದೊಂದು ವಿವಾಹ ಬಂಧನವಿದ್ದಂತೆ. ವೈಷ್ಣವರಲ್ಲಿ ವೈರಾಗ್ಯವೆಂದರೆ, ಈ ಪ್ರಾಪಂಚಿಕ ಬಂಧನವನ್ನು ಕಡಿದುಹಾಕಿ ಪರಮಾತ್ಮನೊಡನೆ ತನ್ನ ಆತ್ಮವನ್ನು ವಿವಾಹವೆಂಬಂತೆ ಬೆಸುಗೆ ಹಾಕುವುದೇ ಆಗಿದೆ.

ಕೇಶವ ಭಾರತಿಗಳು ಮೊದಮೊದಲಿಗೆ ನಿಮಾಯಿಗೆ ಸಂನ್ಯಾಸವನ್ನು ಕೊಡಲು ನಿರಾಕರಿಸಿದುದು ಎರಡು ಕಾರಣಗಳಿಂದ; ಮೊದಲನೆಯದು ಶ್ರೀಕೃಷ್ಣಭಕ್ತಿಪೂರಿತನಾದ ನಿಮಾಯಿ ಈಗಾಗಲೇ ತಮಗಿಂತಲೂ ಶ್ರೇಷ್ಠನಾದವನು ಎಂಬ ಭಾವನೆ. ಸಂನ್ಯಾಸ ಜೀವನವನ್ನು ಕೈಗೊಳ್ಳಲು ತನ್ನ ವೃದ್ಧ ತಾಯಿ ಮತ್ತು ಯುವ ಮಡದಿಯ ಒಪ್ಪಿಗೆ ಮತ್ತು ಸಂಪೂರ್ಣ ಅನುಮತಿಯನ್ನು ನಿಮಾಯಿ ಇನ್ನೂ ಪಡೆದಿಲ್ಲ ಎನ್ನುವುದು ಎರಡನೆಯದು. ನದಿಯಾದ ಭಕ್ತರು ಮತ್ತು ಕಾಟ್ವಾದ ಪ್ರತಿಷ್ಠಿತರೂ ವಿದ್ಯಾವಂತರೂ ಆದ ನಾಗರಿಕರು ನಿಮಾಯಿಯ ಈ ನಿರ್ಧಾರವನ್ನು ತಡೆಯಲು ಒಟ್ಟುಗೂಡಿದರು. ವೃಂದಾವನಕ್ಕೆ ಹೋಗಬೇಕು ಎಂಬ ಒಂದೇ ಇಚ್ಛೆಯು ನಿಮಾಯಿಯ ಮನಸ್ಸನ್ನೆಲ್ಲ ತುಂಬಿ ಹೋಗಿದ್ದರಿಂದ, ಬೇರೆ ಯಾವ ಆಲೋಚನೆಯಾಗಲೀ ಮತ್ತು ತನ್ನ ಸುತ್ತುವರೆದ ಭಕ್ತರ ಅರಿವಾಗಲೀ ಅವನಿಗೆ ಇರಲೇ ಇಲ್ಲ. ತನ್ನ ಜಾಣತನದ ಒತ್ತಾಯದಿಂದ ಮತ್ತು ತೀವ್ರವಾದ ತ್ಯಾಗ ಭಾವನೆಯಿಂದ ಅವನು ಕೇಶವ ಭಾರತಿಗಳ ಮನವೊಲಿಸಲು ಶಕ್ತನಾದನು. ಆ ತಾಪಸಿಯು ನಿಮಾಯಿಗೆ ಸಂನ್ಯಾಸ

ದೀಕ್ಷೆ ಕೊಟ್ಟು ಕೃಷ್ಣ ಚೈತನ್ಯ – ಜನಗಳ ಮನಸ್ಸಿನಲ್ಲಿ ಶ್ರೀಕೃಷ್ಣ ಭಾವವನ್ನು ಉದ್ದೀಪನಗೊಳಿಸುವವನು- ಎಂಬ ನೂತನ ಹೆಸರನ್ನಿತ್ತರು.

ವೃಂದಾವನವನ್ನು ತಲುಪಲೇಬೇಕು, ಅಲ್ಲಿರುವ ಶ್ರೀಕೃಷ್ಣನನ್ನು ಸಂದರ್ಶಿಸಲೇಬೇಕು ಎಂಬ ಹುಚ್ಚು ಬಯಕೆಯಿಂದ ಪ್ರೇರಿತರಾದ ಕೃಷ್ಣ ಚೈತನ್ಯರು ಪಶ್ಚಿಮ ದಿಕ್ಕಿನತ್ತ ಸಾಗಿದರು. ಐದು ದಿನಗಳ ಕಾಲ ಅನ್ನ-ನೀರು-ವಿಶ್ರಾಂತಿಗಳಿಲ್ಲದೆ ರಾರ್‌ಹ ಎಂಬ ಪ್ರದೇಶದ ಕಾಡುಮೇಡುಗಳ ದಾರಿಯಲ್ಲಿ ಸಾಗುತ್ತಿದ್ದ ಅವರಿಗೆ, ಮುಂದೆ ದಾರಿ ತೋಚದಾಯಿತು. ಸಿಕ್ಕ ಸಿಕ್ಕ ದಾರಿ ಹೋಕರಲ್ಲಿ ವೃಂದಾವನಕ್ಕೆ ದಾರಿ ತೋರಿಸಿರೆಂದು ಬಿನ್ನವಿಸಿಕೊಳ್ಳಲಾರಂಭಿಸಿದರು. ಆದರೆ ಈ ಮಧ್ಯೆ ಇನ್ನೊಂದು ವಿಚಿತ್ರ ಅಲ್ಲಿ ನಡೆಯಿತು. ಅವರನ್ನು ಹಿಂಬಾಲಿಸುತ್ತಿದ್ದ ನಿತ್ಯಾನಂದನು ಮುಂದೆ ಮುಂದೆ ಸಾಗಿಹೋಗಿದ್ದ. ಚೈತನ್ಯರು ನಡೆದು ಬರುತ್ತಿದ್ದ ದಾರಿಯಲ್ಲಿ ಸಿಕ್ಕಿದ ಗೋವಳ ಬಾಲಕರಿಗೆ ಹರಿನಾಮ ಸಂಕೀರ್ತನೆಯನ್ನು ಹೇಳಿಕೊಟ್ಟು, ಹಿಂದೆ ಬಿದ್ದಿದ್ದ ಚೈತನ್ಯರಿಗೆ ಗಂಗಾ ನದಿಗೆ ಸಾಗುವ ದಾರಿಯೆ ಬೃಂದಾವನಕ್ಕೆ ಹೋಗುವ ದಾರಿಯೆಂಬಂತೆ ತಪ್ಪುದಾರಿಯನ್ನು ತೋರಿಸಬೇಕೆಂದು ಅವರಿಗೆ ಬೋಧಿಸಿದ್ದನು. ಆ ದಾರಿಯು ಅದ್ವೈತ ಆಚಾರ್ಯನ ಊರಾದ ಶಾಂತಿಪುರವನ್ನು ತಲುಪುತ್ತಿತ್ತು. ಈ ಉಪಾಯ ಫಲಿಸಿತು. ಸಹಜ ಸ್ಥಿತಿ ಮರುಕಳಿಸಿದಾಗ, ತಾನು ಶಾಂತಿಪುರದಲ್ಲಿರುವೆನೆಂಬ ಅರಿವು ಶ್ರೀಚೈತನ್ಯರಿಗೆ ಮೂಡಿತು.

ಈಗ ಮತ್ತೆ ಭಕ್ತರು ಶ್ರೀಚೈತನ್ಯರನ್ನು ಸುತ್ತುವರೆದರು. ಸುದ್ದಿ ನವದ್ವೀಪವನ್ನು ತಲುಪಿದಾಗ, ತಮಗೆ ಪರಿಚಿತನಾದ ನಿಮಾಯಿ ಪಂಡಿತನನ್ನು, ಶ್ರೀಕೃಷ್ಣ ಚೈತನ್ಯನೆಂಬ ಸಂನ್ಯಾಸಿಯ ವೇಷದಲ್ಲಿ ಸಂದರ್ಶಿಸಲು ಜನರ ಪ್ರವಾಹವೇ ಶಾಂತಿಪುರಕ್ಕೆ ಕಾಲ್ನಡಿಗೆಯಲ್ಲಿ ಹರಿದುಬಂತು. ಹರಿಸಂಕೀರ್ತನೆಯ ನಾದ ಶಾಂತಿಪುರದ ಗಗನವನ್ನು ಮುಟ್ಟಿದರೆ, ದಿವ್ಯಭಾವದ ನರ್ತನ ಅದರ ಬೀದಿಗಳಲ್ಲಿ ನಿರಂತರವಾಗಿ ನಡೆಯುತ್ತಿತ್ತು. ಅಹಂಕಾರ ದಿಂದ ಮತ್ತರಾಗಿದ್ದ ನದಿಯಾದ ಬುದ್ಧಿಜೀವಿಗಳೂ ನಿಮಾಯಿ ತೋರ್ಪಡಿಸಿದ ಸಂನ್ಯಾಸದ ಅದಮ್ಯ ಆದರ್ಶದ ಆಕರ್ಷಣೆಗೆ ಒಳಗಾದರು. ನಿತ್ಯಾನಂದನು ಇತರರೊಡನೆ, ನಿಮಾಯಿಯ ತಾಯಿಯಾದ ಶಚೀದೇವಿಯನ್ನೂ ಕರೆದುತಂದ. ಕಳೆದುಹೋಗಿದ್ದ ಮಗ ಮತ್ತು ದುಃಖಿತಪ್ತಳಾಗಿದ್ದ ತಾಯಿಯರ ಪುನರ್ಮಿಲನ ಅತ್ಯಂತ ಭಾವುಕವಾಗಿತ್ತು. ಶಚೀದೇವಿ ಕೂಡ ಸುತ್ತಲೂ ಇದ್ದ ಹಬ್ಬದ ವಾತಾವರಣದಿಂದ ಪ್ರಭಾವಿತಳಾದಳು. ಚೈತನ್ಯರು ಅದ್ವೈತನ ಮನೆಯಲ್ಲಿ ತಂಗಿದ್ದ ಎಲ್ಲ ಹತ್ತು ದಿವಸಗಳಲ್ಲೂ, ತಾನೇ ಕೈಯಾರೆ ತನ್ನ ಮಗನಿಗೆ ಅಡಿಗೆ ಮಾಡಿ ಬಡಿಸುವೆನೆಂದು ಒತ್ತಾಯಿಸಿದಳು. ತಾನು ತಾಯಿಗಾಗಿ ಮಾಡಬೇಕಾದ ಕರ್ತವ್ಯದ ಪ್ರಜ್ಞೆ ಚೈತನ್ಯರಲ್ಲಿ ಜಾಗೃತಗೊಂಡಿತು. ಅದರಿಂದ ಉತ್ತೇಜನಗೊಂಡ ಅವರು ಆಕೆಯೇನಾದರೂ ಒತ್ತಾಯಿಸಿದರೆ, ನವದ್ವೀಪಕ್ಕೆ ಹಿಂತಿರುಗಲೂ ತಯಾರಾದರು. ಆದರೆ ಶಚೀದೇವಿ ಬಹಳ ಉನ್ನತ ಮನಸ್ಸಿನ ಮಹಿಳೆ. ಸಂನ್ಯಾಸಿಯಾಗಿರುವ ತನ್ನ ಮಗನ ಗೌರವ, ತನ್ನ ಸ್ವಂತ ಹಿತಾಸಕ್ತಿಗಿಂತ ಹೆಚ್ಚಿನದು ಎಂದು ಭಾವಿಸಿದಳಾಕೆ. ಚೈತನ್ಯರ ನಿರ್ಗಮನಕ್ಕೆ ತನ್ನ ಪೂರ್ಣ ಅನುಮತಿಯನ್ನು, ಒಂದು ಶರತ್ತಿನ ಮೇಲೆ ಕೊಟ್ಟಳು. ಚೈತನ್ಯರು ವೃಂದಾವನಕ್ಕೆ ಬದಲಾಗಿ ನೀಲಾಚಲಕ್ಕೆ (ಜಗನ್ನಾಥಪುರಿ ಧಾಮ) ಹೋಗಬೇಕೆಂಬುದೇ ಆ ಶರತ್ತು. ಕಾರಣ, ವೃಂದಾವನ ನದಿಯಾದಿಂದ ಎರಡು ಸಾವಿರ ಮೈಲುಗಳಿಗಿಂತ ಹೆಚ್ಚು ದೂರದಲ್ಲಿದೆ. ನೀಲಾಚಲವಾದರೋ ಹತ್ತಿರದಲ್ಲಿದ್ದು, ಶಚಿಯು ತನ್ನ ಮಗನ ಸಮಾಚಾರವನ್ನು ಆಗಾಗ ಪಡೆಯಬಹುದಾಗಿತ್ತು. ಅಷ್ಟು ಮಾತ್ರವಲ್ಲ, ಚೈತನ್ಯರು ಬಂಗಾಳ ಪ್ರದೇಶಕ್ಕೆ ಮತ್ತೆ ಮತ್ತೆ ಭೇಟಿಕೊಡಲೂ ಬಹುದು. ಈ ಒಪ್ಪಂದಕ್ಕೆ ಬಂದೊಡನೆ, ಚೈತನ್ಯರು ಎದ್ದು ನಿಂತರು, "ಹರಿ ಬೋಲ್" ಎನ್ನುತ್ತ ತಮ್ಮ ಸಂಗಡಿಗರೊಡನೆ ಜಗನ್ನಾಥಪುರಿ ಧಾಮದತ್ತ ವೇಗವಾಗಿ ನಡೆಯಲಾರಂಭಿಸಿದರು. ಆ ಸಂಗಡಿಗರೆಂದರೆ—ನಿತ್ಯಾನಂದ, ಮುಕುಂದ, ಜಗದಾನಂದ, ಗೋವಿಂದ, ದಾಮೋದರ ಮತ್ತು ಹರಿದಾಸರು.

(ಮುಂದುವರಿಯುವುದು)

## ಶ್ರೀಕೃಷ್ಣ ಚೈತನ್ಯರ ಸಂನ್ಯಾಸ

ಶ್ರೀರಾಮಕೃಷ್ಣ ಪರಮಹಂಸರಿಂದ ಅವತಾರಪುರುಷರೆಂದು ಗೌರವಿಸಲ್ಪಟ್ಟ, ಬಂಗಾಳದ ಪ್ರಖ್ಯಾತ ವೈಷ್ಣವ ಸಂತ ಶ್ರೀಕೃಷ್ಣ ಚೈತನ್ಯರು (೧೪೮೬-೧೫೩೩), ತಮ್ಮ ಗುರುಗಳಾದ ಕೇಶವ ಭಾರತಿಯವರಲ್ಲಿ ಸಂನ್ಯಾಸಭಿಕ್ಷೆ ಬೇಡಿದಾಗ, ಅವರು ಸಂದೇಹ ಪಡುತ್ತಾ ಹೇಳಿದರು: "ನೀನಿನ್ನೂ ತಾರುಣ್ಯದಲ್ಲಿರುವೆ; ನಿನ್ನ ರೂಪವೋ ಲೋಕಮೋಹಕವಾದುದು! ನಿನಗೆ ಸಂನ್ಯಾಸ ನೀಡುವ ಧೈರ್ಯ ಯಾರಿಗೆ ಬರುತ್ತದೆ?" ಧೃತಿಗೆಡದ ಶ್ರೀಚೈತನ್ಯರು ಹೇಳಿದರು: "ಮಹಾಶಯರೆ, ನೀವು ಸಾಧಕನ ಆಕಾಂಕ್ಷೆಗಳನ್ನು ಪರೀಕ್ಷೆ ಮಾಡಿಯೆ ಸ್ವೀಕರಿಸುತ್ತೀರಿ. ಹಾಗೆಯೆ ನನ್ನನ್ನೂ ಪರೀಕ್ಷಿಸಿ." "ಹಾಗಾದರೆ, ನಿನ್ನ ನಾಲಿಗೆಯನ್ನು ಹೊರ ಚಾಚು!" ಎಂದರು ಭಾರತಿ ಯವರು. ಶ್ರೀಚೈತನ್ಯರು ಹಾಗೆ ಮಾಡಲು ಭಾರತಿಗಳು ಅದರ ಮೇಲೆ ಸ್ವಲ್ಪ ಸಕ್ಕರೆಯ ಕಾಳುಗಳನ್ನು ಹಾಕಿದರು. ಆಶ್ಚರ್ಯ! ಇತರರ ನಾಲಗೆಯಂತೆ ಶ್ರೀಚೈತನ್ಯರ ನಾಲಗೆ ತೇವಗೊಳ್ಳಲೇ ಇಲ್ಲ! ಸಕ್ಕರೆ ನೀರಾಗದೆ ಹಾಗೆಯೇ ಇತ್ತು. ನಂತರ ಬೀಸಿದ ಗಾಳಿಯಿಂದ, ಸಕ್ಕರೆ ಹೊರಕ್ಕೆ ತಳ್ಳಲ್ಪಟ್ಟು ನೆಲದ ಮೇಲೆ ಬಿದ್ದಿತು. ಪರಿಣಾಮವಾಗಿ, ಶ್ರೀಚೈತನ್ಯರ ಕಾಮಾಸಕ್ತಿಯನ್ನು ಪ್ರತ್ಯೇಕವಾಗಿ ಪರೀಕ್ಷಿಸುವ ಆವಶ್ಯಕತೆ ಭಾರತಿಯವರಿಗೆ ಕಂಡುಬರಲಿಲ್ಲ. ಸಂತೃಪ್ತರಾಗಿ ಶ್ರೀಚೈತನ್ಯರಿಗೆ ಸಂನ್ಯಾಸದೀಕ್ಷೆಯನ್ನು ನೀಡಿದರು.

(ಆಧಾರ: ವೇದಾಂತ ಕೇಸರಿ, ನವೆಂಬರ್, ೨೦೦೩)

ಸಂಗ್ರಹ: ಎನ್. ಗೋಪಿನಾಥ